17

# ಪ್ರಸಂಗಿ/ಸಭಾಹಿರಿಯ ಸಂಬಂಧಗಳು

ಒಂದು ಸ್ಥಳಿಕ ಸಭೆಯೊಂದಿಗೆ ಅನೇಕ ವರ್ಷಗಳವರೆಗೆ ಸೇವೆ ಮಾಡಿದ ಒಬ್ಬ ಪ್ರಸಂಗಿಯು ಒಂದು ಸಭೆಯಿಂದ ಅದರ ಹಿರಿಯನಾಗಿರಲು ಮತ್ತು ಸಭಾ ಸೇವಕನಾಗಿರಲು ಆಯ್ಕೆಮಾಡಲ್ಪಟ್ಟನು. ಪ್ರಸಂಗಿಗಳ ಕೂಟದಲ್ಲಿ, ಆ ಕ್ಷೇತ್ರದಲ್ಲಿಯ ಇತರ ಪ್ರಸಂಗಿಗಳು ಅವನನ್ನು ಹೊಗಳಿ ವಂದಿಸಿದರು. ಅವರ ಶುಭಾಶಯವನ್ನು ಸ್ವೀಕರಿಸಲು ಎದ್ದು ನಿಂತುಕೊಂಡನು ಹಾಗೂ, "ಒಂದು ವಾರದವರೆಗೆ ಮಾತ್ರ ಈಗ ಹಿರಿಯನಾಗಿದ್ದೇನೆ ಮತ್ತು ಆಗಲೇ ನಾನು ಪ್ರಸಂಗಿಗಳನ್ನು ದ್ವೇಷಿಸುತ್ತೇನೆ" ಎಂದು ಹೇಳಿದನು!

ಅವನು ತಮಾಷೆಯಲ್ಲಿ ವ್ಯಕ್ತಪಡಿಸಿದ ಮನೋಭಾವನೆಯು ಕೆಲವು ಸಲ ಆಸಕ್ತಿಯಿಂದ ಹಿರಿಯರು ಹಿಡಿದು ಕೊಂಡ ಮನೋಭಾವನೆಯಾಗಿರುತ್ತದೆ. ಕೆಲವು ಸಲ ಭಾವನೆಯು ಪರಸ್ಪರದಾಗಿರುತ್ತದೆ. ಹಿರಿತನಗಳಿಂದ ತಮಗೆ ತಪ್ಪಾಗಿದೆಯೆಂದು ಯೋಚಿಸುವ ಮತ್ತು ದ್ವೇಷಿಸುವವರ ಪ್ರಸಂಗಿಗಳಿಗೆ ಹಿರಿಯರ ಬಗ್ಗೆ ಹೇಳಲಿಕ್ಕೆ ಯಾವುದೇ ಒಳ್ಳೆಯದು ಇರಲಿಕ್ಕಿಲ್ಲ. ಪರಸ್ಪರರ ಅಪನಂಬಿಕೆಯ ಪರಿಣಾಮವು (ಇಲ್ಲವೇ ಕಾರಣವು) ಸರಿಯಾದ ಮಾರ್ಗದಲ್ಲಿ ಒಬ್ಬರಿಗೊಬ್ಬರು ಸಂಬಂಧಿಸದ ಆ ಸಭೆಗಳ ಹಿರಿಯರು ಮತ್ತು ಪ್ರಸಂಗಿಗಳು ಸೋತು ಹೋಗುವದರಿಂದ ಅನೇಕ ಸಮಸ್ಯೆಗಳು ಉದ್ಭವಿಸುವುದಾಗಿದೆ.

ಈ ಪಾಠದ ಪ್ರಬಂಧವು ಪ್ರಸಂಗಿಗಳು ಮತ್ತು ಹಿರಿಯರು ತಮ್ಮ ಸಂಬಂಧಗಳನ್ನು ಸುಧಾರಿಸಿಕೊಂಡರೆ ಈ ಸಮಸ್ಯೆಗಳು ಪ್ರತಿಬಂಧಿಸಲ್ಪಡಬಹುದು ಎಂಬುದಾಗಿದೆ. ಅವರು ಇದನ್ನು ಹೇಗೆ ಮಾಡಬಲ್ಲರು? ಮೂರು ಹೆಜ್ಜೆಗಳು ಅಗತ್ಯವಾಗಿವೆ.

## ಕ್ರಿಸ್ತನಂತಿರುವ ಮನೋಭಾವನೆಗಳನ್ನು ಬೆಳೆಯಿಸಿಕೊಳ್ಳುವುದು

*ಸಭೆಯ ಎಲ್ಲಾ ನಾಯಕರು ಕ್ರಿಸ್ತನಂತಿರುವ ಮನೋಭಾವನೆಗಳನ್ನು ಬೆಳೆಸಿಕೊಳ್ಳುವ ಅಗತ್ಯತೆ ಇರುತ್ತದೆ.* ಇದರಿಂದ ಅವರು ತಮ್ಮನ್ನು ಸೇವಕರಂತೆ ನೋಡಿಕೊಳ್ಳುವ ಅಗತ್ಯತೆಯಿರುತ್ತದೆ. ಮತ್ತು ವೈಯಕ್ತಿಕ ಅಧಿಕಾರಕ್ಕಾಗಿ, ಬಲಕ್ಕಾಗಿ ಇಲ್ಲವೇ ಮಹಿಮೆಗಾಗಿ ಹೋರಾಡುವದನ್ನು ತಡೆಗಟ್ಟುತ್ತದೆ. "ನಿಮ್ಮಲ್ಲಿ ದೊಡ್ಡವರಾಗಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು" (ಮತ್ತಾಯ 20:26) ಎಂಬ ಯೇಸುವಿನ ಮಾತನ್ನು ಅವರು ಜ್ಞಾಪಿಸಿಕೊಳ್ಳುವರು. ಯೇಸುವು ತನ್ನ ಶಿಷ್ಯರ ಪಾದಗಳನ್ನು ತೊಳೆದನು ಮತ್ತು ಅದರಂತೆ ಮಾಡಲು ಅವರಿಗೆ ಹೇಳಿದನು (ಯೋಹಾನ 13:13-17). ಎಲ್ಲದಕ್ಕಿಂತಲೂ ಹೆಚ್ಚಾಗಿ ಒಬ್ಬ ಸೇವಕನ ಮನೋಭಾವನೆಯು ಹಿರಿಯರ ಮತ್ತು ಪ್ರಸಂಗಿಗಳ ಮಧ್ಯದಲ್ಲಿ ಸಂಬಂಧವನ್ನು ನಾಶಪಡಿಸಲು ಭಯಪಡಿಸಿದ ಗರ್ವದಿಂದ ಹುಟ್ಟಿಸಲ್ಪಟ್ಟ ಬಿರುಗಾಳಿಗಳು ಶಾಂತವಾಗುವವು.

ಕ್ರಿಸ್ತನಂತಿರುವ ಹಿರಿಯರು ಮತ್ತು ಪ್ರಸಂಗಿಗಳು ಸಭೆಯ ಒಳಿತಿನ ಮುಂದೆ ತಮ್ಮ ವೈಯಕ್ತಿಕ ಒಳಿತನ್ನು, ಸಭೆಗೋಸ್ಕರ ಸಾಯಲಿಕ್ಕಾಗುವಂತೆ, ಆತನು ಪ್ರೀತಿಸಿದಾಗ ಯೇಸುವು ಮಾಡಿದಂತೆ ಅವರು ಮುಂದಿಡುವರು (ಎಫೆಸ 5:25). ಇದು ಅವರನ್ನು ಇಡೀಯಾಗಿ ಸಭೆಯು ಅವರ ವೈಯಕ್ತಿಕ ಭಾವನೆಗಳಿಗಿಂತ ಹೆಚ್ಚು ಮಹತ್ವದ್ದಾಗಿರುವದೆಂದು ತಿಳಿಯುವಂತೆ ಮಾಡುವುದು.

ಈ ಸಂಬಂಧದಲ್ಲಿ, ಹಿರಿಯರು ಮತ್ತು ಪ್ರಸಂಗಿಗಳು ಇಬ್ಬರೂ ತಮ್ಮ "ಹುದ್ದೆಗಳು" ದೇವರಿಂದ ಕೊಡಲ್ಪಟ್ಟವುಗಳು - ನಿರ್ದಿಷ್ಟವಾದ ಸ್ಥಳದಲ್ಲಿ ಆ ಹುದ್ದೆಗಳನ್ನು ನೆರವೇಲಿಸಬೇಕಾದ ಅಗತ್ಯತೆ ಇರುವದಿಲ್ಲ. ಆದುದರಿಂದ, ಒಬ್ಬ ಹಿರಿಯನಿಗೆ ನಾಯಕತ್ವದ ವರವಿದ್ದರೆ, ಅವನು ಅದನ್ನು ಉಪಯೋಗಿಸುವ ಹಂಗಿನಲ್ಲಿದ್ದಾನೆ - ಒಂದು ಸ್ಥಳಿಕ ಸಭೆಗೆ ಅವನು ನಡಿಸುವದನ್ನು ಇಷ್ಟವಿಲ್ಲದಿದ್ದರೆ ಅದರಲ್ಲಿ ಅದನ್ನು ಉಪಯೋಗಿಸಲು ಒತ್ತಾಯಿಸಬಾರದು. ಒಬ್ಬ ಪ್ರಸಂಗಿಗೆ ಸುವಾರ್ತಿಕನಾಗಿರುವ ವರವಿರಬಹುದು - ಆದರೆ ಒಂದು ಸಭೆಯಲ್ಲಿ ಅವನ ಪ್ರಸಂಗದಿಂದ ಯಾವ ಸಮಸ್ಯೆಗಳು ಉದಯಿಸುವವು ಎಂಬುದನ್ನು ಗಣನೆಗೆ ತೆಗೆದು ಕೊಳ್ಳದೇ ಅವನು ಪ್ರಸಂಗಿಸಬೇಕು ಎಂಬುದು ಇದರ ಅರ್ಥವಲ್ಲ. ಅವನು ಬೇರೆ ಸ್ಥಳಕ್ಕೆ ಹೋಗಬಹುದು. ಎರಡೂ ವಿಷಯಗಳಲ್ಲಿ ಪ್ರಮುಖವಾದ ಪ್ರಶ್ನೆಯು: *ಸಭೆಗೆ ಯಾವುದು ಅತ್ಯುತ್ತಮವಾದದ್ದಾಗಿರುತ್ತದೆ?*

## ಹಿರಿಯರಿಗೂ ಮತ್ತು ಪ್ರಸಂಗಿಗಳಿಗೂ ಮಧ್ಯದಲ್ಲಿ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು

*ಹಿರಿಯರು ಮತ್ತು ಪ್ರಸಂಗಿಯು ತಮ್ಮ ಮಧ್ಯದಲ್ಲಿ ಯಾವುದು ಆದರ್ಶವಾದ ಸಂಬಂಧವು ಎಂಬುದನ್ನು ನಿರ್ಧರಿಸಿಕೊಳ್ಳಬೇಕು. ಅನಂತರ ಅವರು ಆ ಆದರ್ಶಕ್ಕೆ ತಕ್ಕಂತೆ ಜೀವಿಸಲು ಪ್ರಯತ್ನಿಸಬೇಕು.*

ಸಭೆಯ ಪ್ರತಿಯೊಬ್ಬ ನಾಯಕನಿಗೆ ತನ್ನ ಸ್ವಂತ ಪಾತ್ರವಿದೆ. ಹಿರಿಯಲಿಗೆ ಹಿರಿಯರಂತೆ (ಹೆಚ್ಚು ಅನುಭವ ಹೊಂದಿದ ಜನರು), ಸಭಾಪಾಲಕರಂತೆ (ಕುರುಬರಂತೆ), ಮತ್ತು ಬಿಷಪರಂತೆ (ಮೇಲ್ವಿಚಾರಕರಂತೆ ಇಲ್ಲವೇ ಅಧ್ಯಕ್ಷರಂತೆ) ನಡಿಸಲು ಜವಾಬ್ದಾರಿಕೆಯಿರುವುದು. ಅವರು ಆದರ್ಶದಿಂದ, ಬೋಧಿಸುವುದರಿಂದ ಮತ್ತು ಮನವೊಲಿಸುವುದರಿಂದ ನಡಿಸಬೇಕು, "ಮಂದೆಯ ಮೇಲೆ ದೊರೆತನ ಮಾಡುವದರಿಂದ ಅಲ್ಲ." ಪ್ರಸಂಗಿಗಳಿಗೆ ಸಭೆಯಲ್ಲಿ ಮತ್ತು ಸಭೆಯ ಹೊರಗೆ ವಾಕ್ಯವನ್ನು ಪ್ರಸಂಗಿಸಲು ಮತ್ತು ಬೋಧಿಸಲು ಜವಾಬ್ದಾರಿಕೆಯುಳ್ಳವರಾಗಿರುವರು. ಸುವಾರ್ತಿಕರು ಸುವಾರ್ತಾ ಸೇವೆಯಲ್ಲಿ ಸಮಯವನ್ನೂ ಪ್ರಯತ್ನವನ್ನೂ ಕಳೆಯಬೇಕು. ಹಿರಿಯರಿಗಾಗಿಯೂ ಮತ್ತು ಪ್ರಸಂಗಿಗಳಾಗಿಯೂ ಪಾತ್ರಗಳು ಪ್ರಾಮುಖ್ಯವಾಗಿವೆ. ಅವರಿಲ್ಲದೆ ಸಭೆಯು ಮುಂದುವರಿಯಲಾರದು ಮತ್ತು ಇನ್ನೂ ಅಗಿರಬೇಕೆಂದು ಕರ್ತನು ಬಯಸುವ ರೀತಿಯಲ್ಲಿ ಇರಬಹುದು.

ಆದರ್ಶವಾಗಿ, ಒಂದು ಸಭೆಯಲ್ಲಿಯ ಹಿರಿಯರು ಮತ್ತು ಪ್ರಸಂಗಿಯು ಒಬ್ಬರಿಗೊಬ್ಬರು ತಮ್ಮ ಸಂಬಂಧವನ್ನು ಹೇಗೆ ನೋಡಬಹುದು? ಹಿರಿಯರು ಕೆಲಸದವರನ್ನು ನೇಮಿಸುವವನು ಪ್ರಸಂಗಿಯು ಒಬ್ಬ ಕೆಲಸದವನು ಆಗಿರುವರೋ? ಅವರು ತಮ್ಮನ್ನು ಯಜಮಾನನು/ಕೆಲಸದವನು ಎಂಬ ಸಂಬಂಧದಲ್ಲಿ ನೋಡಿ ಕೊಳ್ಳಬಹುದೋ? ಉತ್ತರವು "ಇಲ್ಲ" ಎಂದಿರುತ್ತದೆ. ಸಭೆಗೆ ಮತ್ತು ದೇವರಿಗೆ ಹಿರಿಯರ ಜವಾಬ್ದಾರಿಕೆಗಳು, ಸಭೆಗಾಗಿ ಯಾರು ಪ್ರಸಂಗಿಸುವರು, ಅವನಿಗೆ ಎಷ್ಟು ಸಂಬಳಕೊಡಬೇಕು, ಅವನು ಏನು ಮಾಡುವನು, ಅವನು ತನ್ನ ಜವಾಬ್ದಾರಿಕೆಗಳನ್ನು ಮಾಡುತ್ತಿರುವನೋ ಇಲ್ಲವೋ ಎಂಬುದರ ಬಗ್ಗೆ ತೀರ್ಮಾನಗಳನ್ನು ಮಾಡಬೇಕಾಗಿದ್ದರೂ, ಹಿರಿಯರು ಮತ್ತು ಪ್ರಸಂಗಿಗಳು, ಯಜಮಾನ/ಕೆಲಸದವ ಎಂಬ ಪ್ರಾಥಮಿಕ ಸಂಬಂಧದಲ್ಲಿ ತೊಂದರೆಗೊಳಗಾಗುತ್ತಾರೆ.ಪ್ರಸಂಗಿಯು ವೈಯಕ್ತಿಕವಾಗಿ ಕೆಲಸಮಾಡುವಂತೆಯಾಗಲಿ ಇಲ್ಲವೇ ಹಿರಿಯರ ಮೇಲೆ ಅಧಿಕಾರವಿರುವವನಂತಾಗಲೀ ವರ್ತಿಸಬಾರದು.

ಹಿರಿಯರು ಮತ್ತು ಪ್ರಸಂಗಿಗಳು ತಾವು ಜೊತೆ ಕೆಲಸದವರು, ಅನ್ಯೋನ್ಯತೆಯುಳ್ಳವರು, ಇಲ್ಲವೇ ಜೊತೆ ಸೇವಕರು, "[ದೇವ]ರೊಂದಿಗೆ ಕೆಲಸದವರು" (2 ಕೊರಿಂಥ

6:1; KJV), ಒಂದೇ ಗುರಿಗೆ ಕೆಲಸಮಾಡುವವರು ಆಗಿರುವರು, ಆದರೆ ಜವಾಬ್ದಾರಿಕೆಗಳು ಭಿನ್ನವಾಗಿರುವವು. ಅವರ ಗುರಿಯು ಒಂದಾಗಿ ಕೆಲಸಮಾಡುವುದು, ಸಭೆಯ ಒಳಿತಿಗಾಗಿ ಒಬ್ಬರಿಗೊಬ್ಬರು ಸಹಕರಿಸುವವರೂ ಆಗಿರಬೇಕು.

## ಹೋರಾಟಗಳನ್ನು ತಪ್ಪಿಸಿಕೊಳ್ಳುವುದು ಇಲ್ಲವೇ ಪರಿಹರಿಸುವುದು

*ಹಿರಿಯರು ಮತ್ತು ಪ್ರಸಂಗಿಯು ಬರಬಹುದಾದ ಹೊರಾಟದ ಕ್ಷೇತ್ರಗಳನ್ನು ಗುರುತಿಸ ಬೇಕು ಹಾಗೂ ಹೋರಾಟಗಳನ್ನು ತಪ್ಪಿಸಿಕೊಳ್ಳಲು ಇಲ್ಲವೇ ಅವುಗಳನ್ನು ಬಗೆಹರಿಸಲು ಅಗತ್ಯವಾದದ್ದನ್ನು ಮಾಡಬೇಕು.* ಹೋರಾಟಗಳ ಕೆಲವು ವಿಭಾಗಗಳನ್ನು ಯೋಚಿಸುವ ಅಗತ್ಯತೆಯಿದೆ.[1]

### ತತ್ವಗಳ ಭಿನ್ನಾಭಿಪ್ರಾಯಗಳು

*ಸಮಸ್ಯೆ*: ಕೆಲವು ಸಲ ಹಿರಿಯರು ಮತ್ತು ಪ್ರಸಂಗಿಯು ತತ್ವದ ವಿಷಯದಲ್ಲಿ ಇಲ್ಲವೇ ಪರಿಶುದ್ಧ ಬರಹವು ಹೇಗೆ ತಿಳಿದು ಕೊಳ್ಳಲ್ಪಡಬೇಕು ಎಂಬುದರ ಬಗ್ಗೆ ಭಿನ್ನಾಭಿಪ್ರಾಯಗಳು ಬರುತ್ತವೆ. ಹೀಗೆ ಸಂಭವಿಸುವಾಗ, ಸಾಮಾನ್ಯವಾಗಿ ತೊಂದರೆಯು ಬರುತ್ತದೆ.

*ಪರಿಹಾರ*: ಸಾಧ್ಯವಾದ ಮಟ್ಟಿಗೆ, ಹಿರಿಯರು ಮತ್ತು ಪ್ರಸಂಗಿಯು ಒಬ್ಬರೊಬ್ಬರ ದೃಷ್ಟಿಕೋನಗಳನ್ನು ಪ್ರಸಂಗಿಯು ಸ್ಥಾನವನ್ನು ಸ್ವೀಕರಿಸಿಕೊಳ್ಳುವ ಮೊದಲು ಅರ್ಥಮಾಡಿಕೊಳ್ಳುವ ಅಗತ್ಯತೆಯಿದೆ. ಅವರು ಮೂಲತಃವಾಗಿ ಒಪ್ಪದಿದ್ದರೆ, ಪ್ರಸಂಗಿಯು ಸ್ಥಾನವನ್ನು ಸ್ವೀಕರಿಸತಕ್ಕದ್ದಲ್ಲ.

ಅಲ್ಲಿ ಪ್ರಸಂಗಿಯು ಆಗಲೇ ಇದ್ದರೆ, ಅನಂತರ ತಾತ್ವಿಕವಾದ ಮತ್ತು ಪರಿಶುದ್ಧ ಬರಹದ ಗಂಭೀರವಾದ ವಾಗ್ವಾದಗಳು ಉದ್ಭವಿಸಿದರೆ ಹೇಗೆ? (1) ಪ್ರಸಂಗಿಯು ತಾನು ನಂಬಿದ್ದರ ಬಗ್ಗೆ ಜನರನ್ನು ಮೋಸಗೊಳಿಸಿದರೆ, ಅವರನ್ನು ಬಿಟ್ಟು ಹೋಗುವಂತೆ ಕೇಳಿಕೊಳ್ಳಬಹುದು. (2) ಪ್ರಸಂಗಿಯು ತನ್ನ ಮನಸ್ಸನ್ನು ಬದಲಾಯಿಸಿದರೆ, ಇಲ್ಲವೇ ಆ ವಿಷಯವು ಮುಂದೆ ತರಲ್ಪಡದಿದ್ದರೆ, "ತತ್ವದ ವಿಷಯಗಳು" ಎಂಬ ಪಾಠದಲ್ಲಿ ಕೊಡಲ್ಪಟ್ಟ ತತ್ವದ ಸಮಸ್ಯೆಗಳನ್ನು ಕಡಿತ ಸೂಚನೆಗಳನ್ನು ಅನ್ವಯಿಸಬೇಕು. (3) ಸಾಂಬಂಧಿಕವಾಗಿ ಮಹತ್ವವಿಲ್ಲದ ವಿಷಯದ ಬಗ್ಗೆ ಸಭೆಯು ವಿಭಾಗವಾಗುವದನ್ನು ತಡೆಗಟ್ಟಲು ಬೇರೆ ಮಾರ್ಗವಿಲ್ಲದಿದ್ದರೆ, ಆಗ, ಬಹುಶಃ ಪ್ರಸಂಗಿಯು ಬಿಟ್ಟು ಹೋಗಬೇಕಾಗುತ್ತದೆ. *ಯಾವುದೇ ವ್ಯಕ್ತಿಯನ್ನು ಶಿಕ್ಷಿಸುವದಕ್ಕಿಂತ ಕರ್ತನ ಸಭೆಯ ಸಮಾಧಾನ ಮತ್ತು ಪ್ರಗತಿಯು ಹೆಚ್ಚು ಮಹತ್ವದ್ದಾಗಿರುತ್ತದೆ.*

### ಪಾತ್ರ ಗಲಿಬಿಲಿ

*ಸಮಸ್ಯೆ*: ಸಾಮಾನ್ಯವಾಗಿ, ವಿವಿಧ ಸಭಾ ನಾಯಕರು - ಹಿರಿಯರು, ಡೀಕನರು, ಮತ್ತು ಪ್ರಸಂಗಿಗಳು - ಏನು ಮಾಡಬೇಕೆಂಬುದರ ಬಗ್ಗೆ ಆಗಾಗ ಗಲಿಬಿಲಿಯಿರುತ್ತದೆ. ಪ್ರತ್ಯೇಕವಾಗಿ, ಸಮಸ್ಯೆಗಳು ಉದ್ಭವಿಸುತ್ತವೆ. ಯಾಕಂದರೆ ಹಿರಿಯರು ಸಭೆಯ ಪ್ರಸಂಗಿಯೊಂದಿಗೆ ಅವನ ಜವಾಬ್ದಾರಿಕೆಗಳ ಬಗ್ಗೆ ಮತ್ತು ಅವನು ತನ್ನ ಸಮಯವನ್ನು ಹೇಗೆ ಕಳೆಯಬೇಕು ಎಂಬುದರ ಬಗ್ಗೆ ಒಪ್ಪಿಕೊಳ್ಳುವದಿಲ್ಲ.

*ಪರಿಹಾರ*: ಮೊದಲನೆಯದಾಗಿ, ತಡೆಗಟ್ಟುವಿಕೆಯು ಮಹತ್ವದ್ದಾಗಿರುತ್ತದೆ! *ಪ್ರಸಂಗಿಯು ಸಭೆಯೊಂದಿಗೆ ಕೆಲಸವನ್ನು ಪ್ರಾರಂಭಿಸುವ ಮೊದಲು ಸ್ಪಷ್ಟವಾಗಿ ಅರ್ಥಮಾಡಿಕೊಂಡ ಒಪ್ಪಂದವನ್ನು ಮಾಡಿಕೊಳ್ಳುವದರಿಂದ ಸಮಸ್ಯೆಯು ಹೆಚ್ಚಾದ ಸಲ ಪರಿಹರಿಸಲ್ಪಡಬೇಕು.* ಪ್ರಸಂಗಿಯು ಏನು ಮಾಡಬೇಕೆಂಬುದರ ಬಗ್ಗೆ ಹಿರಿಯರು ಮತ್ತು ಪ್ರಸಂಗಿಯು ಒಪ್ಪಿಕೊಂಡ ಮೇಲೆ ಈ ಒಪ್ಪಂದವು ಬರೆಯಲ್ಪಟ್ಟು ರುಜು ಹಾಕಲ್ಪಡತಕ್ಕದ್ದು. ಸಮಯವು ದಾಟಿದಂತೆ ಯಾವುದಾದರೂ ಬದಲಾವಣೆ ಸಂಭವಿಸಿದರೆ, ಆ ಬದಲಾವಣೆಗಳು ಮೂಲ ದಾಖಲೆಯಲ್ಲಿ

ಮಾಡಲ್ಪಡತಕ್ಕದ್ದು.

ಎರಡನೆಯದಾಗಿ, ಸಂಪರ್ಕವು ಮಹತ್ವದ್ದಾಗಿದೆ! ಆಕಸ್ಮಿಕವಾಗಿ ಏನಾದರೂ ಸಂಭವಿಸಿದರೆ (ಮೂಲ ಒಪ್ಪಂದದಿಂದ ಒಪ್ಪಿಕೊಳ್ಳದ್ದು ಇಲ್ಲದಿದ್ದರೆ) ಇಲ್ಲವೇ ಮೂಲ ಒಪ್ಪಂದವು ಸರಿಯಾಗಿ ನಡೆಯದಿದ್ದರೆ, ಆಗ ಹಿರಿಯರು ಮತ್ತು ಪ್ರಸಂಗಿಯು ಪರಿಸ್ಥಿತಿಯ ಬಗ್ಗೆ ಉದಾರವಾಗಿ ಮಾತಾಡುವ ಅಗತ್ಯತೆಯಿರುತ್ತದೆ. ಇಬ್ಬರ ಮಧ್ಯದಲ್ಲಿ ಸಂಪರ್ಕವು ತೆರೆದಿಡಲ್ಪಟ್ಟದ್ದಾಗಿರಬೇಕು.

**ಪ್ರಸಂಗಿಯ ಅಸಂತೃಪ್ತಿ**

*ಸಮಸ್ಯೆ*: ಪ್ರಸಂಗಿಗಳು ಬಹಳ ಸಲ ತಾವು ಹಿರಿಯರಿಂದ ಮತ್ತು/ಇಲ್ಲವೇ ಸಭೆಯಿಂದ ತಪ್ಪಾಗಿ ನಡಿಸಿಕೊಳ್ಳಲ್ಪಟ್ಟಿದ್ದೇವೆ ಎಂಬ ಭಾವನೆಯಲ್ಲಿ ಇರುತ್ತಾರೆ. ಈ ಪ್ರಸಂಗಿಗೆ ಮುಂದುವರಿಯಲು ಕಾರಣಕೊಡಬಹುದು. ನಮ್ಮ ಸಹೋದರತ್ವದಲ್ಲಿ, ಒಬ್ಬ ಪ್ರಸಂಗಿಯು ಒಂದು ಸಭೆಯಲ್ಲಿ ಸಾಂಬಂಧಿಕವಾಗಿ ಸ್ವಲ್ಪ ಸಮಯ (ಎರಡು ಇಲ್ಲವೇ ಮೂರು ವರ್ಷ ಇಲ್ಲವೆ ಕಡಿಮೆ) ಇರುವುದು ಒಂದು ನಿಯಮದಂತಾಗಿದೆ. ಹೆಚ್ಚಾದ ಸಭೆಯ ಬೆಳವಣಿಗೆಯ ಪರಿಣಿತರು ಪ್ರಸಂಗಿಯು ಹೆಚ್ಚು ವರ್ಷ ಇದ್ದರೆ, ಸಭೆಯು ಬೆಳವಣಿಗೆಯಾಗುವ ಸಾಧ್ಯತೆ ಇದೆಯೆಂದು ಒಪ್ಪಿಕೊಳ್ಳುತ್ತಾರೆ.

*ಪರಿಹಾರ*: ಈ ಸಮಸ್ಯೆಯನ್ನು ಪರಿಹರಿಸಲು ಹಿರಿಯರು ಮತ್ತು ಪ್ರಸಂಗಿಯು ಏನನ್ನಾದರೂ ಸಹಾಯ ಮಾಡಬಹುದು. ಪ್ರಸಂಗಿಯು ಈ ಕೆಳಗಿನ ಸಂಗತಿಗಳನ್ನಾದರೂ ಮಾಡಬಹುದು:

(1) ಅವನು ತನ್ನ ನಿರೀಕ್ಷೆಗಳು ಹೇಗೆ ವಾಸ್ತವಿಕವಾದವುಗಳಾಗಿವೆ ಎಂಬುದನ್ನು ಮೌಲ್ಯಮಾಪನ ಮಾಡಿಕೊಳ್ಳಬೇಕು. ಪ್ರಸಂಗಿಗಳು ಯಾವಾಗಲೂ ಒಳ್ಳೆಯ ಜೀವನ ನಡಿಸುತ್ತಿದ್ದರೂ ಯಾವಾಗಲೂ ಇನ್ನೂ ಹೆಚ್ಚಾದದ್ದನ್ನು ಬಯಸುವವರಾಗಿರುತ್ತಾರೆ.[2] ಯಾವುದೇ ಸಮಸ್ಯೆಗಳಿಲ್ಲದ ಪರಿಪೂರ್ಣ ಸ್ಥಳಿಕ ಸಭೆಗಳು ಇರುವದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. (ಪರಿಪೂರ್ಣ ಸಭೆಯು ಅಸ್ತಿತ್ವದಲ್ಲಿದ್ದರೆ, ಜನರು ಪರಿಪೂರ್ಣ ಪ್ರಸಂಗಿಗಾಗಿ ಹುಡುಕುತ್ತಿರುವರು!)

(2) ಪ್ರಸಂಗಿಯು ಸಹ ಪ್ರಸಂಗಿಸುವಿಕೆಯ ಕಡೆಗೆ ತನ್ನ ಉದ್ದೇಶಗಳನ್ನು ಹಾಗೂ ತನ್ನ ಮನೋಭಾವನೆಗಳನ್ನು ತಾನೇ ಕೇಳಿಕೊಳ್ಳಬೇಕು. ಅವನು ಪ್ರತಿಯೊಂದು ಸಣ್ಣ ಸಂಗತಿಯ ಬಗ್ಗೆ ದೂರಿದರೆ, ಅವನು ತನ್ನನ್ನು ಆಮೋಸ ಮತ್ತು ಪೌಲನೊಂದಿಗೆ ಹೇಗೆ ಹೋಲಿಸಿಕೊಳ್ಳುವನು?

(3) ಪ್ರಂಸಗಿಗೆ ಯಥಾರ್ಥವಾದ ದೂರುಗಳು ಇಲ್ಲವೇ ಅಗತ್ಯತೆಗಳು ಇದ್ದು ಅವು ಪೂರೈಸಲ್ಪಡದಿದ್ದರೆ, *ಈ ದೂರುಗಳನ್ನು, ಅಗತ್ಯತೆಗಳನ್ನು ಹಿರಿಯರಿಗೆ ತಿಳಿಸ ಬೇಕು,* ತನ್ನೊಳಗೆ ವಿರೋಧವನ್ನು ಬೆಳಿಸಿಕೊಳ್ಳಬಾರದು, ಹೆಚ್ಚು ಸಂಬಳ ಕೊಡುವ ಇನ್ನೊಂದು ಕೆಲಸವನ್ನು ಹುಡುಕಿಕೊಂಡು ಹೊರಟು ಹೋಗುವದಕ್ಕಿಂತ, "ನನಗೆ ಹೆಚ್ಚು ಬೇಕು" ಎಂದು ಹಿರಿಯರಿಗೆ ಕೇಳಬೇಕು. ತಾನು ಯಾಕೆ ಬಿಟ್ಟುಹೋದೆನೆಂದು ಹಿರಿಯರು ಆಶ್ಚರ್ಯಪಡುವಂತೆ ಮಾಡಬಾರದು.

ಹಿರಿಯರು ತಮ್ಮ ಪಾತ್ರವನ್ನೂ ಮಾಡಬೇಕು. ಹಿರಿಯರಿಗೆ ಈ ಕೆಳಗಿನ ಸೂಚನೆಗಳು ಮಹತ್ವವುಳ್ಳವುಗಳಾಗಿವೆ:

(1) ಪ್ರಸಂಗಿಗೆ ಚೆನ್ನಾಗಿ ಒದಗಿಸಲ್ಪಡುವಂತೆ ಹಿರಿಯರು ನೋಡಿಕೊಳ್ಳತಕ್ಕದ್ದು. ಒಳ್ಳೇ ಸಂಬಳ ಕೊಡತಕ್ಕದ್ದು. ಪ್ರಸಂಗಿಯು ತನ್ನನ್ನು ನೋಡಿಕೊಳ್ಳುವಲ್ಲಿ ತನ್ನ ಹಣಕಾಸಿನ ವಿಷಯದಲ್ಲಿ ಗಮನ ಕೊಡದಿರುವಾಗಲೂ ಅವನನ್ನು ಹಿರಿಯರು ಗಮನಿಸಬೇಕು.

(2) *(ಪೂರ್ಣವಧಿ) ಪ್ರಸಂಗಿಯ ಪ್ರಾಪಂಚಿಕ ಕ್ಷೇಮಾಭಿವೃದ್ಧಿಯು ತಮ್ಮ*

*ನಿಯಂತ್ರಣದಲ್ಲಿರುವದನ್ನು ಅರ್ಥಮಾಡಿಕೊಳ್ಳಬೇಕು!* ಅವನು ಹೆಚ್ಚನ್ನು ಪಡೆದು ಕೊಳ್ಳುವನೋ ಇಲ್ಲವೋ ಎಂಬುದು ಅವರ ಆಸಕ್ತಿಯಾಗದಿದ್ದರೂ, ಅವನಿಗೆ ಅದು ಜೀವನ ಇಲ್ಲವೇ ಮರಣದ ವಿಷಯವಾಗಬಹುದು!

**ಹಿರಿಯನ ಅಸಂತೃಪ್ತಿ**

*ಸಮಸ್ಯೆ*: ಹಿರಿಯರು ಅನೇಕ ಸಲ ತಾವು ಪ್ರಸಂಗಿಯಿಂದ ಚೆನ್ನಾಗಿ ನಡಿಸಿಕೊಳ್ಳ ಲ್ಪಟ್ಟಿರುವದಿಲ್ಲವೆಂದು ಭಾವಿಸುತ್ತಾರೆ. ಬಹಳ ವರ್ಷಗಳವರೆಗೆ ಇಟ್ಟು ಕೊಳ್ಳಬಹುದಾದ ಪ್ರಸಂಗಿಯನ್ನು ಅವರು ಹುಡುಕಿ ಒಳ್ಳೇ ಸಂಬಳ ಕೊಡುವದರಿಂದ ಇಟ್ಟು ಕೊಳ್ಳ ಬಹುದು. ಅದಕ್ಕೆ ಪ್ರತಿಯಾಗಿ ಅವನು ತನ್ನ ಜೀವನದ ಉಳಿದ ಭಾಗವನ್ನು ಅಲ್ಲಿಯೇ ಕಳೆಯುವ ರೀತಿ ಯಲ್ಲಿ ಮಾತಾಡಬಹುದು. ಹೀಗಿದ್ದರೂ ಹೆಚ್ಚು ದೊಡ್ಡ ಸಭೆಗೆ ಹೋಗುವ ಮೊದಲನೆಯ ಅವಕಾಶವನ್ನು ಉಪಯೋಗಿಸಿಕೊಂಡು ಬಿಟ್ಟುಹೋಗುತ್ತಾನೆ - ಆಗ ಹಿರಿಯರು ಪುನಃ ಎಲ್ಲವನ್ನೂ ಪ್ರಾರಂಭಿಸಬೇಕು. ಅವರು ಬಿಟ್ಟು ಹೋದ ಪ್ರಸಂಗಿಯ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಾರೆ. ಮತ್ತು "ದೊಡ್ಡ ಸಂಗತಿಗಳಿಗೆ" ತಾನು ಹೋಗುವಂತೆ ಅವರನ್ನು ಪಾವಟಿಗಳಂತೆ ಉಪಯೋಗಿಸಿದನು ಎಂದು ಅಂದು ಕೊಳ್ಳುತ್ತಾರೆ. ಪ್ರಸಂಗಿಗಳೂ ಸಹ ತಮ್ಮನ್ನು ಇಲ್ಲವೇ ತಮ್ಮ ನಂಬಿಕೆಯನ್ನು ತಪ್ಪಾಗಿ ಪ್ರತಿನಿಧೀಕರಿಸಬಹುದು ಅಥವಾ ತಮ್ಮ ಒಪ್ಪಂದಕ್ಕೆ ಸರಿಯಾಗಿ ಜೀವಿಸುವದರಲ್ಲಿ ಸೋತು ಹೋಗಿರಬಹುದು (ಅವರು ಮೈಗಳ್ಳರಾ ಗಿರಬಹುದು), ಹಿರಿಯರ ಗಮನಕ್ಕೆ ತರದೇ ಸಭೆಯು ಸಂಗತಿಗಳನ್ನು ಮಾಡುವಂತೆ ನಡಿಸಬಹುದು. ಅನ್ಯಾಯವಾಗಿ ಹಿರಿಯರನ್ನು ಟೀಕಿಸಬಹುದು.

*ಪರಿಹಾರ*: ಸಮಸ್ಯೆಯನ್ನು ಪರಿಹರಿಸಲು, ಹಿರಿಯರು ಈ ಕೆಳಗಿನವನ್ನು ಮಾಡಬಹುದು: (1) ಪ್ರಸಂಗಿಯು ಮೈಗಳ್ಳನಾಗಿರದಂತೆ ನೋಡಿಕೊಳ್ಳುವುದು. ಮೊದಲನೆಯದಾಗಿ ಹಿರಿಯರು ಸರಿಯಾದ ಪ್ರಸಂಗಿಯನ್ನು ಪಡೆದುಕೊಳ್ಳಲಿಕ್ಕೆ ತಮಗೆ ಸಾಧ್ಯವಾದದ್ದನ್ನು ಮಾಡತಕ್ಕದ್ದು. ಇದನ್ನು ಮಾಡಲಿಕ್ಕೆ ಅವರು ಶಿಫಾರಸ್ಸುಗಳನ್ನು ಪಡೆಯಬೇಕು. ಮತ್ತು ಅವನು ಪ್ರಸಂಗಿಸುತ್ತಿದ್ದ ಸಭೆಯೊಂದಿಗೆ ಪರೀಕ್ಷಿಸತಕ್ಕದ್ದು. (2) ಪ್ರಸಂಗಿಯು ತಮ್ಮೊಂದಿಗೆ ಕ್ರಮಪ್ರಕಾರವಾಗಿ ಸಂಪರ್ಕಿಸುವಂತೆ ಪ್ರೋತ್ಸಾಹಿಸಿರಿ. (3) ಪ್ರಸಂಗಿಯನ್ನು *ಅವನ ಕುಟುಂಬವನ್ನು* ಸಂತೋಷದಲ್ಲಿಡಲು ಪ್ರಯತ್ನಿಸಿರಿ. ಅದೇ ಸಮಯದಲ್ಲಿ, ಅವನು ಹೋಗಲು ನಿರ್ಧರಿಸಿಕೊಂಡಿದ್ದರೆ, ಅವನು ಇರುವಂತೆ ಒತ್ತಾಯ ಪಡಿಸಲು ಮಾರ್ಗವಿರುವದಿಲ್ಲವೆಂದು ಅವರು ಅರ್ಥಮಾಡಿಕೊಳ್ಳತಕ್ಕದ್ದು.

**ಸಂಪರ್ಕದ ಸೋಲುವಿಕೆ**

*ಸಮಸ್ಯೆ*: ಅನೇಕ ಕ್ಷೇತ್ರಗಳಲ್ಲಿ ಹಿರಿಯರಿಗೂ ಪ್ರಸಂಗಿಗೂ ಮಧ್ಯದಲ್ಲಿ ಸಮಸ್ಯೆಗಳು ಉದ್ಭ ವಿಸುವವು. ಅದಕ್ಕೆ ಮೂಲ ಕಾರಣವು ಸಂಪರ್ಕಿಸುವಿಕೆಯಲ್ಲಿ ಬಿದ್ದು ಹೋಗುವುದು. ಸಂಪರ್ಕ ಸೋಲುವಿಕೆಗಳು ಅವರ ಸಂಬಂಧಗಳ ಹಲವಾರು ವಿಷಯಗಳಲ್ಲಿ ಸಂಭವಿಸಬಹುದು: (1) ಪ್ರಾರಂಭದಲ್ಲಿ ಹಿರಿಯರ ಮತ್ತು ಪ್ರಸಂಗಿಯ ಮಧ್ಯದಲ್ಲಿಯ ಸಂಪರ್ಕವು ಸಾಕಾಷ್ಟಾಗಿರಲಿಕ್ಕಿಲ್ಲ; ಎರಡು ಪಕ್ಷಗಳಿಂದ ನಿರೀಕ್ಷೆ ಗಳು ಸ್ಪಷ್ಟಪಡಿಸಲ್ಪಟ್ಟಿರಲಿಕ್ಕಿಲ್ಲ. (2) ಅದರ ನಂತರ, ಅವರ ಮಧ್ಯದಲ್ಲಿ ಸಂಪರ್ಕವೇ ಇರಲಿಕ್ಕಿಲ್ಲ. ಅವರು ಒಂದಾಗಿ ಕೂಡಿ ಬಂದದ್ದು, ಸಂದರ್ಶಿಸಿದ್ದು ಖಚಿತವಾಗಿರಬಹುದು. (3) ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಲಿಕ್ಕೆ ಪ್ರತಿಯೊಬ್ಬರಿಗೆ ತೊಂದರೆಯಿದ್ದಿರಬಹುದು. ಸಂಪರ್ಕವು ಬಹಳವಾಗಿದೆ ಎಂದು ತೋರಿ ದಾಗಲೂ, ಅದು ಯಶಸ್ವಿಯಾದದ್ದಾಗಿರಲಿಕ್ಕಿಲ್ಲ. ಹಿರಿಯರು ಮತ್ತು ಪ್ರಸಂಗಿಯು ತಾವು ಸಂಗತಿಗಳನ್ನು ಭಿನ್ನವಾಗಿ ನೋಡುವೆನೆಂತಲೂ, ತಾವು ಭಿನ್ನವಾದ ಸ್ಥಳದಿಂದ ಬಂದಿದ್ದೇ ವೆಂತಲೂ, ತಮಗೆ ಭಿನ್ನವಾದ ದೃಷ್ಟಿಕೋನ ಗಳಿವೆಯೆಂತಲೂ, ವಿಶೇಷವಾಗಿ ಪ್ರಸಂಗಿಯು

ಯುವಕನಾಗಿದ್ದರೆ ಹೀಗಿರುವನೆಂದೂ ಅರ್ಥಮಾಡಿಕೊಳ್ಳತಕ್ಕದ್ದು.

*ಪರಿಹಾರ*: ಈ ಸಮಸ್ಯೆಗಳಿಗೆ ಹಲವಾರು ಪರಿಹಾರಗಳಿರುತ್ತವೆ:

ಒಂದು ಸ್ಪಷ್ಟವಾದ ತಿಳುವಳಿಕೆ ತಲುಪಬೇಕು - ಮತ್ತು ಅದನ್ನು ಬರಹದಲ್ಲಿ ಹಾಕಬೇಕು - ಹಿರಿಯರಿಗೂ ಪ್ರಸಂಗಿಗೂ ಮಧ್ಯದಲ್ಲಿ ಸ್ಪಷ್ಟವಾದ ಸಂಬಂಧಗಳನ್ನು ಜವಾಬ್ದಾರಿಕೆಗಳನ್ನು ಕುರಿತು ಅರಿತು ಕೊಳ್ಳಬೇಕು. ಪ್ರಸಂಗಿಯು ಯಾವಾಗ ರಜೆತೆಗೆದು ಕೊಳ್ಳಬೇಕು, ಅವನು ಸ್ಥಳಿಕ ಕಾಲೇಜಿನಲ್ಲಿ ಪಾಠಗಳನ್ನು ತೆಗೆದು ಕೊಳ್ಳ ಬಹುದೋ ಇತ್ಯಾದಿ ಸೌಲಭ್ಯಗಳ ಬಗ್ಗೆ ಬಹಿರಂಗವಾಗಿ ಪ್ರಸಂಗಿಯು ಕೆಲಸ ಮಾಡಲು ಪ್ರಾರಂಭಿಸುವ ಮೊದಲು ಚರ್ಚಿಸಲ್ಪಡಬೇಕು.

ಆಗಾಗ ಹಿರಿಯರು ಮತ್ತು ಪ್ರಸಂಗಿಯು ಸಾಮಾನ್ಯವಾಗಿಯೂ ವಿಶೇಷವಾಗಿಯೂ ಕರ್ತನ ಕಾರ್ಯದ ಬಗ್ಗೆ ಮಾತಾಡತಕ್ಕದ್ದು. ಅವರ ಸಂಪರ್ಕಿಸುವಿಕೆಯ ಗುಣಗಳಲ್ಲಿ ಒಂದು ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಲ್ಲಿ ಸ್ವತಂತ್ರರಾಗಿರುವದಾಗಿದೆ.

ಹಿರಿಯರು ಮತ್ತು ಪ್ರಸಂಗಿಯು (ಮಾತಾಡುವವರಂತೆ ಮತ್ತು ಕೇಳುಗರಂತೆ) ಸಂಪರ್ಕಿಸಲು ದೃಢವಾದ ಪ್ರಯತ್ನ ಮಾಡಬೇಕು. ಪ್ರತ್ಯೇಕವಾಗಿ ಹಿರಿಯರು ಪ್ರಸಂಗಿಯು ಯುವಕನೂ, ತಾತ್ಕಾಲಿಕವಾದವನೂ ಮತ್ತು ನೇಮಕಮಾಡಿಕೊಳ್ಳಲ್ಪಟ್ಟವನೂ ಆಗಿದ್ದುದರಿಂದ ಅವನೊಂದಿಗೆ ಸರಿಸಮಾನವಾಗಿ ಮಾತನಾಡಲಾಗುವದಿಲ್ಲ ಎಂದು ಭಾವಿಸಬಾರದು. ಇನ್ನೊಂದೆಡೆಯಲ್ಲಿ ಪ್ರಸಂಗಿಯು ತನಗೂ ಹಿರಿಯರಿಗೂ ಮಧ್ಯದಲ್ಲಿ ಏರ್ಪಡುವ ಡೊಂಗರಕ್ಕೆ ಸೇತುವೆ ಕಟ್ಟುವವನಾಗಿರಬೇಕು.

### ವ್ಯಕ್ತಿತ್ವದ ಸಮಸ್ಯೆಗಳು

*ಸಮಸ್ಯೆ*: ಕೆಲವು ಸಲ ಹಿರಿಯರು ಮತ್ತು ಪ್ರಸಂಗಿಯು ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗುವದಿಲ್ಲ. ಅಂಥ ಸಮಸ್ಯೆಗಳಿಗೆ ಕಾರಣಗಳು ಯಾವವು?

ಕೆಲವು ಸಮಸ್ಯೆಗಳು ಹಿರಿಯರಂತೆ ಮತ್ತು ಪ್ರಸಂಗಿಗಳಂತೆ ಸೇವೆ ಮಾಡುವವರ ಬಲಹೀನತೆಗಳ ಕಾರಣದಿಂದ ಉದ್ಭವಿಸುತ್ತದೆ. ಪ್ರತಿಯೊಬ್ಬ ಕ್ರೈಸ್ತನು ನೂರಕ್ಕೆ ನೂರರಷ್ಟು ಕ್ರಿಸ್ತನಂತಿದ್ದರೆ, ಯಾವುದೇ "ವ್ಯಕ್ತಿತ್ವದ ಸಮಸ್ಯೆಗಳು" ಸಭೆಗೆ ತೊಂದರೆ ಕೊಡುವದಿಲ್ಲ. ಹೀಗಿದ್ದರೂ, ಎಲ್ಲಾ ಸಭೆಗಳ ಹಿರಿಯರು ಮಾನವರಾಗಿದ್ದು ತಪ್ಪುಗಳನ್ನು ಮಾಡುವವರಾಗಿದ್ದಾರೆ. ಆದುದರಿಂದ, ಅವರ ಬಲಹೀನತೆಗಳು, ಅಲ್ಪತೆಗಳು ಮತ್ತು ಪಾಪಗಳು ತೊಂದರೆಗಳನ್ನು, ಉಪದ್ರವಗಳನ್ನು ಹುಟ್ಟಿಸುತ್ತವೆ. ಈ ಕೆಳಗಿನದು ಸಮಸ್ಯೆಗಳಿಗೆ ಕಾರಣವಾಗುವ ಬಲಹೀನತೆಯೆಂದು ತಿಳಿದು ಕೊಳ್ಳಬಹುದು: ಅತಿಯಾಗಿ ಸೂಕ್ಷ್ಮ ಮನಸುಳ್ಳವರಾಗಿರುವುದು; ಸಾಕಷ್ಟು ಸಹಾನು ಭೂತಿಯಿಲ್ಲದಿರುವುದು; ದಯೆಯ ಕೊರತೆ; ಕ್ಷಮಿಸುವ ಕೊರತೆ; ಹಿಂದಿನ ತಪ್ಪುಗಳನ್ನು ಇಲ್ಲವೇ ಪಾಪಗಳನ್ನು ಮರೆತು ಬಿಡಲು ಮನಸ್ಸು ಮಾಡದೇ ಇರುವುದು; ದೊಡ್ಡವನೆಂದು ಅನ್ನಿಸಿಕೊಳ್ಳಲು ಅಪೇಕ್ಷೆ; ಮತ್ಸರ ಮತ್ತು ಭೌತಿಕತೆ.

ಕೆಲವು ಸಮಸ್ಯೆಗಳು ಸಭೆಯ ನಾಯಕರ ಜೀವಿತಗಳಲ್ಲಿಯ ವೈಯಕ್ತಿಕ ಸಮಸ್ಯೆಗಳಿಂದ ಉದ್ಭವವಾಗುತ್ತವೆ. ಅವು ಒಬ್ಬರೊಬ್ಬರ ಸಂಬಂಧಗಳ ಮೇಲೆ ಮತ್ತು ಸಭೆಯ ಸಂಬಂಧದೊಂದಿಗೆ ಪರಿಣಾಮ ಮಾಡುತ್ತವೆ. ನಾನು ಮನೆಯಲ್ಲಿ ಹೇಗೆ ಮಾಡುತ್ತೇನೆ, ಉದಾಹರಣೆಯಾಗಿ, ನಾನು ನಿನಗೆ ಸಂಬಂಧಿಸುವದರ ಮೇಲೆ ಪರಿಣಾಮ ಮಾಡುತ್ತದೆ. ನಾನು ಒಬ್ಬ ಪ್ರಸಂಗಿಯಾಗಿದ್ದರೆ ಇಲ್ಲವೇ ಹಿರಿಯರಲ್ಲಿ ಒಬ್ಬನಾಗಿದ್ದರೆ ಮತ್ತು ನನ್ನ ಹೆಂಡತಿಯ ಆರೋಗ್ಯ ಚೆನ್ನಾಗಿರದಿದ್ದರೆ ... ಇಲ್ಲವೇ ನಾನು ಒಳ್ಳೇ ಆರೋಗ್ಯದಲ್ಲಿ ಇಲ್ಲದಿದ್ದರೆ ... ಇಲ್ಲವೇ ನನ್ನ ಮಕ್ಕಳೊಂದಿಗೆ ನನಗೆ ಸಮಸ್ಯೆಗಳಿದ್ದರೆ ... ಇಲ್ಲವೇ ಹಣಕಾಸಿನ ಸಮಸ್ಯೆಗಳಿದ್ದರೆ ... ಇಲ್ಲವೇ ಶೋಧನೆಯ ಬಗ್ಗೆ ಅಥವಾ ಅಪರಾಧದ ಬಗ್ಗೆ ಸಮಸ್ಯೆಗಳಿದ್ದರೆ ... ಇಲ್ಲವೇ ನನ್ನ ಕೆಲಸಕ್ಕೆ ಸಂಬಂಧಿಸಿ ಸಮಸ್ಯೆಗಳಿದ್ದರೆ ... ಇಲ್ಲವೇ ನನ್ನ ವಯಸ್ಸು ಅಥವಾ ಜೀವನದ ಹಂತಕ್ಕೆ

ಸಂಬಂಧಿಸಿ ಸಮಸ್ಯೆಗಳಿದ್ದರೆ ... ಇತರರೊಂದಿಗೆ ಹೊಂದಿಕೊಂಡು ಹೋಗುವದರಲ್ಲಿ ನನಗೆ ಕಠಿಣವಾಗುತ್ತದೆ.

ಕೆಲವು ಸಮಸ್ಯೆಗಳು ಹಿರಿಯರು ಮತ್ತು ಪ್ರಸಂಗಿಯು ಬಹಳ ಭಿನ್ನವಾಗಿರುವ ಸಂಗತಿಗೆ ಸಂಬಂಧಿಸಲ್ಪಟ್ಟಿರುತ್ತವೆ. ಇತರವುಗಳಲ್ಲಿ ಈ ಕೆಳಗಿನ "ಒಡಕುಗಳು" ಅವರನ್ನು ವಿಭಾಗಿಸಬಹುದು: (1) ವಯಸ್ಸಿನ ಬಿರುಕು, (2) ವಿದ್ಯೆಯ ಬಿರುಕು, ಇಲ್ಲವೇ (3) ಸಂಸ್ಕೃತಿಯ ಬಿರುಕು - ಪ್ರಸಂಗಿಯು ಪಟ್ಟಣದಿಂದ ಬಂದವನಾಗಿರಬಹುದು ಹಾಗೂ ಅವರು ಗ್ರಾಮಗಳಿಂದ ಬಂದವರಾಗಿರಬಹುದು.

ಕೆಲವು ಸಮಸ್ಯೆಗಳು ವ್ಯಕ್ತಿತ್ವಗಳ ಇಲ್ಲವೇ ವ್ಯಕ್ತಿತ್ವದ ವಿಧಗಳ ಭಿನ್ನತೆಗೆ ಸಂಬಂಧಿಸಿರಬಹುದು. ಜನರು ನಿಜವಾಗಿಯೂ ಮನೋಭಾವನೆಗಳಲ್ಲಿ, ನೋಟುಗಳಲ್ಲಿ, ಪ್ರತಿಕ್ರಿಯಿಸುವ ವಿಧಾನಗಳಲ್ಲಿ ಹೊಂದಿಕೊಂಡು ಹೋಗುವ ಮಾರ್ಗಗಳಲ್ಲಿ ಇತ್ಯಾದಿ ಭಿನ್ನವಾಗಿರಬಹುದು. ಉದಾಹರಣೆಯಾಗಿ ಒಬ್ಬನು ಅಂತರ್ಮುಖಿಗಳಾದ ಜನರ ಮತ್ತು ಬಹಿರ್ಮುಖಿಗಳಾದ ಜನರ ಮಧ್ಯದಲ್ಲಿ "ಟೈಪ್ ಎ" ವ್ಯಕ್ತಿತ್ವವುಳ್ಳವರ ಮತ್ತು "ಟೈಪ್ ಬಿ" ವ್ಯಕ್ತಿತ್ವವುಳ್ಳವರ ಮಧ್ಯದಲ್ಲಿ ಭಿನ್ನತೆಗಳನ್ನು ಯೋಚಿಸಬಹುದು. ಈ ವ್ಯಕ್ತಿತ್ವದ ಭಿನ್ನತೆಗಳು ಸಮಸ್ಯೆಗಳಿಗೆ ಕಾರಣವಾಗಬಹುದು. ಹಾಗೆ ಆಗುವಾಗ, ಸಭಾ ಹಿರಿಯರ ಮತ್ತು ಪ್ರಸಂಗಿಯ ಮಧ್ಯದಲ್ಲಿಯ ಭಿನ್ನತೆಗಳು ಅವರು ನಂಬಿಗಸ್ತ ಕ್ರೈಸ್ತರಾಗಿರುವರೋ ಇಲ್ಲವೋ ಎಂಬುದರ ಬಗ್ಗೆ ಯಾವ ಸಂಬಂಧವೂ ಇರುವದಿಲ್ಲ. ಜನರು ಯಾಕೆ ಭಿನ್ನರಾಗಿರುವರು ಎಂಬುದರ ಬಗ್ಗೆ ಹೆಚ್ಚು ಮಹತ್ವವಿರುವದಿಲ್ಲ. ಜನರು ಭಿನ್ನವಾಗಿರುವುದು ಮಹತ್ವದ್ದಾಗಿರುತ್ತದೆ. ಮತ್ತು ಅವರ ಭಿನ್ನತೆಗಳು ಒಡಕನ್ನು ಹುಟ್ಟಿಸಲು ಕಾರಣವಾಗಬಹುದು! ಸಾಮಾನ್ಯವಾಗಿ ಜನರು ಮೂಲ ಮನೋಭಾವನೆಯಲ್ಲಿ ಇಲ್ಲವೇ ವ್ಯಕ್ತಿತ್ವದಲ್ಲಿ ತಮ್ಮಂತಿರುವವರೊಂದಿಗೆ ಚೆನ್ನಾಗಿ ಹೊಂದಿಕೊಂಡು ಹೋಗುವರು.

*ಪರಿಹಾರ*: ತಪ್ಪುಗಳ ಬಗ್ಗೆ ಮತ್ತು ಪಾಪಗಳ ಬಗ್ಗೆ ಸಮಸ್ಯೆಗಳನ್ನು ಪರಿಹರಿಸಲು, ಸಭೆಯ ನಾಯಕರು ಒಬ್ಬರೊಬ್ಬರ ಬಲಹೀನತೆಗಳನ್ನು ಅರ್ಥಮಾಡಿಕೊಳ್ಳಲು, ಒಬ್ಬರನ್ನೊಬ್ಬರು ಕ್ಷಮಿಸಲು, ಮತ್ತು ಆತ್ಮಿಕವಾಗಿ ಬೆಳೆಯುವದನ್ನು ಕಲಿತು ಕೊಳ್ಳಬೇಕು. ಹಾಗಾದರೆ ಅವರು ಪುನಃ ಪುನಃ ಅದೇ ತಪ್ಪುಗಳನ್ನು ಮಾಡುವದಿಲ್ಲ.

ವೈಯಕ್ತಿಕ ತೊಂದರೆಗಳನ್ನು ಸಂಬಂಧಿಸಿ ಸಮಸ್ಯೆಗಳಿಗಾಗಿ, ಎಲ್ಲರೂ ತಮ್ಮ ಸಮಸ್ಯೆಗಳನ್ನು ಒಬ್ಬರಿಗೊಬ್ಬರು ಹಂಚಿಕೊಳ್ಳಬೇಕು, ಒಬ್ಬರೊಬ್ಬರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಹುಡುಕಬೇಕು, ತಾವು ಮಾಡಬೇಕಾದದ್ದರಲ್ಲಿ ತಪ್ಪಿ ಹೋಗುವಾಗ ಕ್ಷಮಿಸುವದಕ್ಕೆ ಸಿದ್ಧರಾಗಿರಬೇಕು ಮತ್ತು ಒಬ್ಬರೊಬ್ಬರಿಗಾಗಿ ದೊಡ್ಡ ರೀತಿಯಲ್ಲಿ ಪರಸ್ಪರ ಸಹಾಯ ಹೊಂದಿಕೊಳ್ಳಬೇಕು.

ಹಿರಿಯರ ಮತ್ತು ಪ್ರಸಂಗಿಯ ಮಧ್ಯದಲ್ಲಿಯ ಹಿನ್ನೆಲೆಗಳಲ್ಲಿ ಭಿನ್ನತೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಇಲ್ಲಿ ಕೆಲವು ಪರಿಹಾರಗಳಿರುತ್ತವೆ: (1) ಪ್ರಸಂಗಿಗಳು ಈ ಭಿನ್ನತೆಗಳನ್ನು ನಿರೀಕ್ಷಿಸುವದನ್ನು ಹಾಗೂ ಒಬ್ಬ ಮಿಶನರಿಯಂತೆ ಅವುಗಳೊಂದಿಗೆ ವ್ಯವಹರಿಸುವದರಲ್ಲಿ ತರಬೇತಿ ಹೊಂದುವ ಅಗತ್ಯತೆಯಿದೆ. (2) ಸ್ಥಳಿಯ ಜನರು, ವಿಶೇಷವಾಗಿ ಹಿರಿಯರು, ಪ್ರಸಂಗಿಯ ಕಡೆಗೆ ದಯೆಯುಳ್ಳವರೂ ಸಹಾನು ಭೂತಿಯುಳ್ಳವರೂ ಆಗಿರತಕ್ಕದ್ದು.

ವ್ಯಕ್ತಿತ್ವದಲ್ಲಿಯ ಭಿನ್ನತೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗಾಗಿ; ಸಭೆಯ ನಾಯಕನು ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಮತ್ತು ಯಾವುದು ಮಧ್ಯಮವಾದದ್ದು ಎಂಬುದನ್ನು ಪ್ರತ್ಯೇಕಿಸಲು ಪ್ರಾರಂಭಿಸಬೇಕು. ಅವರಿಗೆ ಯಾವ ರೀತಿಯ ವ್ಯಕ್ತಿತ್ವದ ರೀತಿಯಿರುವದೆಂಬುದನ್ನು ಗಣಿಸದೇ ಒಳ್ಳೆಯದನ್ನು ಮಾಡಲಿಕ್ಕೆ ಪ್ರಯತ್ನಿಸಬೇಕು. ವ್ಯಕ್ತಿತ್ವದ ಭಿನ್ನರೀತಿಯಿದ್ದ ಇತರರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು ಮತ್ತು ಅವರು ಭಿನ್ನವಾಗಿರುವಂತೆ ಬಿಡಬೇಕು.

**ಅಧಿಕಾರದ ಹೋರಾಟಗಳು**

*ಸಮಸ್ಯೆ*: ಸಭಾ ಹಿರಿಯರ ಮತ್ತು ಪ್ರಂಸಗಿಯ ಮಧ್ಯದಲ್ಲಿ ಹೋರಾಟವು ಭಿನ್ನವಾದ ರೂಪದಲ್ಲಿ ತೋರಿದರೂ ಅದು ಅಧಿಕಾರದ ಹೋರಾಟದ ಮೇಲೆ ಅವಲಂಭಿಸಿರುತ್ತದೆ. "ಯಾರು ಮೇಲ್ವಿಚಾರಣೆಯಲ್ಲಿರುವರು?" ಎಂಬುದು ನಾಯಕತ್ವದಲ್ಲಿ ಹೋರಾಟ ಬರುವಾಗ ಉದ್ಭವಿಸುವ ಪ್ರಶ್ನೆಯಾಗಿರುತ್ತದೆ.

*ಪರಿಹಾರ*: ದೇವರ ರಾಜ್ಯದಲ್ಲಿ ಬಲ ಮತ್ತು ಅಧಿಕಾರಕ್ಕಾಗಿ ಅಪೇಕ್ಷೆಯು ನಾಯಕರ ಲಕ್ಷಣವಾಗಿರಬಾರದೆಂದು ಒಪ್ಪಿಕೊಳ್ಳುವುದು ಸಮಸ್ಯೆಗೆ ಉತ್ತರವಾಗಿರುತ್ತದೆ. ಸಭೆಯಲ್ಲಿ ನಿಜವಾದ ಶಿಷ್ಯನ ಪ್ರಾಥಮಿಕ ಧ್ಯೇಯವು ಸೇವೆಯಾಗಿರುತ್ತದೆ (ಮತ್ತಾಯ 20:20-28). ಅಧಿಕಾರಕ್ಕಾಗಿ ಹೋರಾಡುವವರು ಮಾನಸಾಂತರ ಪಡಬೇಕು. ಅಧಿಕಾರ ಲಾಲಸೆಯ ಪ್ರಸಂಗಿಗೆ ಕರ್ತನ ಸಭೆಯ ಪೀಠದ ಮೇಲೆ ಸ್ಥಳವಿರುವದಿಲ್ಲ ಮತ್ತು ಅಧಿಕಾರ ಲಾಲಸೆಯ ಹಿರಿಯರು ಆ ಸಭೆಯ ನಾಯಕರಾಗಿ ಸೇವೆ ಮಾಡಲು ಅನರ್ಹರಾಗಿರುತ್ತಾರೆ.

## ಮುಕ್ತಾಯ

ಹಿರಿಯರ ಮತ್ತು ಪ್ರಸಂಗಿಯ ಮಧ್ಯದಲ್ಲಿ ಉದ್ಭವಿಸುವ ಸಮಸ್ಯೆಗಳ ಬಗ್ಗೆ ಅಷ್ಟು ಬಹಳ ಮಾಹಿತಿಯು ಒಳ್ಳೇ ಸಂಬಂಧಗಳು, ಸಂತೋಷವುಳ್ಳ ಪ್ರಸಂಗಿಗಳು ಇಲ್ಲವೇ ಪ್ರೀತಿಸುವ ಹಿರಿಯರು ಸ್ವಲ್ಪವಾಗಿರುವರು ಎಂಬುದನ್ನು ಸೂಚಿಸುತ್ತದೆ. ಅದು ತಪ್ಪಾದ ತೀರ್ಮಾನವಾಗಿರುತ್ತದೆ. ಕೆಲವು ಸಲ ಒಬ್ಬ ಪ್ರಸಂಗಿಯು ಒಂದು ಹಿರಿತನದೊಂದಿಗೆ ವರ್ಷಗಳವರೆಗೆ ಕೆಲಸ ಮಾಡುತ್ತಾನೆ. ಹೆಚ್ಚಾದ ಪ್ರಸಂಗಿಗಳು ಬೈಬಲಿಗನುಗುಣವಾಗಿರುವರು, ಕಠಿಣ ಕೆಲಸ ಮಾಡುವರು, ದಯೆಯುಳ್ಳವರಾಗಿರುವರು, ಮತ್ತು ಸಭಾಹಿರಿಯರನ್ನು ಗೌರವಿಸುವರು. ಹೆಚ್ಚಾದ ಹಿರಿಯರು ಅರ್ಹತೆಯುಳ್ಳವರು, ವಿಚಾರವಂತರು, ಪ್ರಸಂಗಿಯ ಬಗ್ಗೆ ಗಮನವಹಿಸುವವರು ಆಗಿರುತ್ತಾರೆ. ಹೆಚ್ಚಾದ ಉದಾಹರಣೆಗಳಲ್ಲಿ ಸಭಾ ಹಿರಿಯರು ಮತ್ತು ಪ್ರಸಂಗಿಯು ಕ್ರಿಸ್ತನು ಅಪೇಕ್ಷಿಸಿದಂತೆ ಸಭೆಯನ್ನು ಕಟ್ಟುವಲ್ಲಿ ಸಾಮರಸ್ಯದಿಂದ ಕೆಲಸಮಾಡುತ್ತಾರೆ.

ಪೌಲನು ತನ್ನ ಎರಡನೆಯ ಪ್ರಸಂಗ ಪ್ರಯಾಣದ ಅಂತ್ಯದಲ್ಲಿ ಯೆರೂಸಲೇಮಿಗೆ ಹಿಂದಿರುಗಿ ಪ್ರಯಾಣ ಮಾಡುತ್ತಿದ್ದಂತೆ, ಅವನು ಎಫೆಸದ ಹಿರಿಯರನ್ನು ಕರೆದನು - ಅಲ್ಲಿ ಅವನು ಮೂರು ವರ್ಷ ಸೇವೆ ಮಾಡಿದ್ದನು - ಮಿಲೇತದಲ್ಲಿ ಅವನು ಅವರನ್ನು ಸಂದರ್ಶಿಸಿದನು. ಅವರಿಗೆ ಅಲ್ಲಿ ಅವನು ಸ್ಮರಣೀಯವಾದ "ವಿಯೋಗ ಪ್ರಸಂಗವನ್ನು" ಮಾಡಿದನು. ಮಾತುಗಳನ್ನು ಮುಗಿಸಿದ ತರುವಾಯ ಅವನು ಅವರೊಂದಿಗೆ ಮೊಣಕೊಲೂರಿ ಪ್ರಾರ್ಥಿಸಿದನು.

ಅವರೆಲ್ಲರೂ ಅತ್ತರು; ಅವರು ಪೌಲನನ್ನು ಅಪ್ಪಿಕೊಂಡು ಮುದ್ದಿಸಿದರು, ತನ್ನನ್ನು ಅವರು ಪುನಃ ನೋಡುವದಿಲ್ಲವೆಂದು ಹೇಳಿದ್ದರಿಂದ ಅವರು ದುಃಖಿಸಿದರು. ಅನಂತರ ಅವನನ್ನು ಅವರು ಹಡಗಿಗೆ ತಂದು ಬಿಟ್ಟರು (ಅಪೊಸ್ತಲರ ಕೃತ್ಯಗಳು 20:36-38). ಆ ರೀತಿಯ ನಿಕಟ ಸಂಬಂಧವು ಹಿರಿಯರ ಮತ್ತು ಸುವಾರ್ತಿಕನ ಮಧ್ಯದಲ್ಲಿ ಇರತಕ್ಕದ್ದು.

"ವಾಕ್ಯವು ನಮ್ಮೊಳಗೆ ನೋಡುವವರೆಗೆ ನಾವು ವಾಕ್ಯದೊಳಗೆ ನೋಡತಕ್ಕದ್ದು."

"ಆತನು ಮೂಲ ಫೋಟೋ ಗ್ರಾಫರನು; ನಾವು ರಿಪ್ರಿಂಟ್ಸ್ ಆಗಿದ್ದೇವೆ."

---

ಟಿಪ್ಪಣೆಗಳು

[1]ಹಿರಿಯರ ಮತ್ತು ಪ್ರಸಂಗಿಗಳ ಮಧ್ಯದಲ್ಲಿಯ ಸಂಬಂಧಗಳಿಗೆ ಸಂಬಂಧಿಸಿದ ಸಮಸ್ಯೆಗಳ

ಯಾದಿಗಾಗಿ - ಡೇವಿಡ್ ರೋಪರ್ ಅವರಿಗೆ ಕೃತಜ್ಞನಾಗಿದ್ದೇನೆ. [2]See Coy Roper, "Poor Little Me: I'm a Preacher," *Firm Foundation* 83 (11 October 1966): 645.